ಚುಕ್ಕೆ ಗುರುತಿನ ಪ್ರಶ್ನೆ ಸಂ.70 (597)
ಮಾನ್ಯ ಸದಸ್ಯರಾದ (ಶ್ರೀ ಐಹೊಳೆ ಮಹಾಲಿಂಗಪ್ಪರವರು ಹಾಜರಿರಲಿಲ್ಲ)

ಚುಕ್ಕೆ ಗುರುತಿನ ಪ್ರಶ್ನೆ ಸಂ.71 (634)
ಮಾನ್ಯ ಸದಸ್ಯರಾದ (ಶ್ರೀ ಜೆ. ನರಸಿಂಹಸ್ವಾಮಿಯವರು ಹಾಜರಿರಲಿಲ್ಲ)
ಅಕ್ರಮ ಮರಳು ಗಣಿಗಾರಿಕೆ
72 : (465)
ಶ್ರೀ ಜಯಚಂದ್ರ ಟಿ. ಬಿ. (ಶಿರಾ)

ಅ) ರಾಜ್ಯದಲ್ಲಿ ಸರ್ಕಾರದ ಮರಳು ಗಣಿಗಾರಿಕೆಯ ಅಸ್ಪಷ್ಟ ನೀತಿ ನಿಯಮಗಳಿಂದಾಗಿ ನಿರಂತರವಾಗಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆಯಿಂದ ಅಂತರ್ಜಲ ಕುಸಿದು, ರೈತರು ಸಂಕಷ್ಟಕ್ಕೆ ಸಿಲುಕಿ ಕುಡಿಯುವ ನೀರಿಗೂ ಪರಿತಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಳ್ಳಿಗಾಡಿನ ಮರಳು ಗಣಿಗಾರಿಕೆಯ ಪ್ರದೇಶದಲ್ಲಿ ಅಕ್ರಮ ಮರಳು ಸಾಗಾಣಿಕೆಯ ಲಾರಿಗಳು ಸಾಮರ್ಥ್ಯಕ್ಕೂ ಹೆಚ್ಚಿನ ಭಾರದ ಮಿತಿ ಮೀರಿದ ಒತ್ತಡದಿಂದಾಗಿ ರಸ್ತೆಗಳು ದುರ್ಅವಸ್ಥೆಗೊಂಡು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅಕ್ರಮ ಮರಳು ಗಣಿಗಾರಿಕೆಯನ್ನು ಸಂಪೂರ್ಣ ಹಿಡಿತಕ್ಕೆ ತೆಗೆದುಕೊಳ್ಳಲು ಹಾಗೂ ಬೊಕ್ಕಸದ ಆದಾಯ ಹೆಚ್ಚಿಸಲು ಸರ್ಕಾರದ ಕ್ರಮ ಕೈಗೊಳ್ಳುವುದೇ ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯ ಮಂತ್ರಿರವರು)

ಅ) ಹೊಸ ಮರಳು ನೀತಿಯಂತೆ ಮರಳು ಗಣಿಗಾರಿಕೆ ಮತ್ತು ಮಾರಾಟದ ಹೊಣೆಗಾರಿಕೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ. ಇವರು ಪರಿಸರಕ್ಕೆ ಹಾನಿ ಯಾಗದಂತೆ ಮರಳು ಗಣಿಗಾರಿಕೆ ಮಾಡಿ ಒಳ್ಳೆಯ ಗುಣ ಮಟ್ಟದ ಮರಳನ್ನು ಕಡಿಮೆ ಬೆಲೆಗೆ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ. ನದಿ ಪಾತ್ರಗಳಲ್ಲಿ ಲಭ್ಯವಿರುವ ಮರಳಿನ ನಿಕ್ಷೇಪಗಳ

ಬ್ಲಾಕ್‌ಗಳನ್ನು ಲೋಕೋಪಯೋಗಿ ಕಂದಾಯ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಗುರುತಿಸಿ ಲಭ್ಯವಿರುವ ಮರಳಿನ ಪ್ರಮಾಣವನ್ನು ಅಂದಾಜಿಸುತ್ತಾರೆ. ಮರಳು ಗಣಿಗಾರಿಕೆಯನ್ನು ಒಂದು ಮೀಟರ್ ಆಳದವರೆಗೆ ಮಾಡಲು ಸೀಮಿತಗೊಳಿಸಲಾಗಿದೆ. ಇದರ ಬಗ್ಗೆ ಕೇಂದ್ರ ಅಂತರ್ಜಲ ಮಂಡಳಿಯವರು ಕೋಲಾರ ಜಿಲ್ಲೆಯಲ್ಲಿ ಅಧ್ಯಯನ ಮಾಡಿ ವರದಿ ಸಲ್ಲಿಸಿದ್ದ ಅದರನ್ವಯ 1 ಮೀಟರ್ ಆಳದವರೆಗೆ ಮರಳು ಗಣಿಗಾರಿಕೆ ಮಾಡುವುದರಿಂದ ಅಂತರ್ಜಲದ ಶೇಖರಣೆಗೆ ತೊಂದರೆಯಾಗುವುದಿಲ್ಲ.

ಆ) ಹೊಸ ಮರಳು ನೀತಿಯಂತೆ ಲೋಕೋಪಯೋಗಿ ಇಲಾಖೆಯವರು ಮರಳು ಗಣಿಗಾರಿಕೆ ಮಾಡಿ ಪ್ರತಿ ಲಾರಿಗೆ ಭಾರ ಹೊರುವ ಸಾಮರ್ಥ್ಯಕ್ಕೆ ಅನುಗುಣವಾಗಿ ಮರಳು ತುಂಬಿ ಪರವಾನಿಗೆಯನ್ನು ನೀಡುತ್ತಾರೆ. ರಾಜ್ಯಾದ್ಯಂತ ಆಯ್ದ ಭಾಗಗಳಲ್ಲಿ ತನಿಖಾ ಠಾಣೆಗಳನ್ನು ನಿರ್ಮಿಸಿದ್ದು, ಲಾರಿಗಳನ್ನು ಜಿಲ್ಲಾ ಉಸ್ತುವಾರಿ ಸಮಿತಿಯ ಸದಸ್ಯ ಇಲಾಖೆಯ ಅಧಿಕಾರಿಗಳು ತಪಾಸಣೆ ಮಾಡಿ ನಿಯಮ ಬಾಹಿರವಾಗಿ ಸಾಮರ್ಥ್ಯಕ್ಕಿಂತ ಹೆಚ್ಚಿನ ಭಾರದ ಮರಳನ್ನು ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಲ್ಲಿ ಅಂತಹ ವಾಹನಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಅಕ್ರಮ ಮರಳು ಗಣಿಗಾರಿಕೆಯನ್ನು ಮತ್ತು ಸಾಮರ್ಥ್ಯಕ್ಕಿಂತ ಹೆಚ್ಚಿನ ಭಾರ ಸಾಗಿಸುವುದನ್ನು ನಿಯಂತ್ರಿಸಲು ಮರಳು ಸಾಗಾಣಿಕೆ ಮಾಡುವ ಎಲ್ಲಾ ವಾಹನಗಳಿಗೆ GPS/RFID ಅಳವಡಿಸಬೇಕು,ಮತ್ತು ವಾಹನದ ಮುಂಭಾಗದಲ್ಲಿ ಹಳದಿ ಬಣ್ಣ ಹಚ್ಚಬೇಕು. ಖನಿಜ ರವಾನೆ ಪರವಾನಗಿಯಲ್ಲಿ ನಮೂದಿಸಿರುವ ಪ್ರಮಾಣದ ಮರಳನ್ನು ಮಾತ್ರ ಸಾಗಾಣಿಕೆ ಮಾಡಬೇಕು. ಇದಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: CI 305 MMN 2012 ದಿನಾಂಕ: 28.11.2012 ರಂದು ಹೊರಡಿಸಲಾಗಿದೆ.

ಅಕ್ರಮ ಮರಳು ಗಣಿಗಾರಿಕೆ ಸಾಗಾಣಿಕೆ ಮಾಡುವ ವಾಹನಗಳನ್ನು ತಪಾಸಣೆ ಮಾಡಿ ಕರ್ನಾಟಉಪ ಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 43 (3) ರಂತೆ ಕ್ರಮಕೈಗೊಳ್ಳಲು ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಎಲ್ಲಾ ಸದಸ್ಯ ಇಲಾಖೆಗಳಿಗೆ ಅಧಿಕಾರ ನೀಡಲಾಗಿದೆ. ಪ್ರಸ್ತುತ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ ಮರಳು ಸಾಗಾಣಿಕೆ ಮಾಡುತ್ತಿದ್ದ 26,358 ವಾಹನಗಳ ತಪಾಸಣೆ ಮಾಡಿ ಇವುಗಳಲ್ಲಿ 2466 ವಾಹನಗಳಿಗೆ ದಂಡ ವಧಿಸಿ

ರೂ.559.49 ಲಕ್ಷ ವಸೂಲಿ ಮಾಡಲಾಗಿದೆ. ಹಾಗೂ 155 ವಾಹನಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಅನಧಿಕೃತ ಗಣಿಗಾರಿಕೆಯಿಂದ ಸಂಗ್ರಹಿಸಿದ್ದ 302 ಕ್ಯೂಬಿಕ್ ಮೀಟರ್ ಮರಳನ್ನು ವಶಪಡಿಸಿಕೊಂಡು ರೂ.6.7 ಲಕ್ಷಕ್ಕೆ ಹರಾಜು ಮಾಡಲಾಗಿದೆ.

ಬೇಡಿಕೆಗನುಗುಣವಾಗಿ ನದಿ ಮರಳು ಸರಬರಾಜಾಗದ ಕಾರಣ ಇದಕ್ಕೆ ಪರ್ಯಾಯವಾಗಿ ಉತ್ಪಾದಿತ ಮರಳು (Manufactured sand) ತಯಾರಿಕ ಘಟಕಗಳಿಗೆ ಆದ್ಯತೆ ಮೇರೆಗೆ ಕಲ್ಲು ಗಣಿಗುತ್ತಿಗೆ ಮಂಜೂರು ಮಾಡಲಾಗುವುದು. ಈ ಉತ್ಪಾದಿತ ಮರಳನ್ನು ಸರ್ಕಾರಿ ಕಾಮಗಾರಿಗಳಲ್ಲಿ ಕಡ್ಡಾಯವಾಗಿ ಬಳಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಹೊಸ ಮರಳು ನೀತಿಯಂತೆ ದಿನಾಂಕ: 02.07.2011 ರಿಂದ ಮರಳು ಗಣಿಗಾರಿಕೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು, 2011–12 ನೇ ಸಾಲಿನಲ್ಲಿ ಮರಳು ಮಾರಾಟದಿಂದ ರೂ. 6534.94 ಲಕ್ಷ ಸಂಗ್ರಹವಾಗಿದೆ. 2012–13 ನೇ ಸಾಲಿನಲ್ಲಿ ನವೆಂಬರ್ ಅಂತ್ಯದವರೆಗೆ ರೂ. 7977.93 ಲಕ್ಷ ಸಂಗ್ರಹ ವಾಗಿರುತ್ತದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಮರಳು ಗಣಿಗಾರಿಕೆಯಿಂದ ರಾಜ್ಯದ ಬೊಕ್ಕಸಕ್ಕೆ ಗಣನೀಯವಾಗಿ ಆದಾಯ ಹೆಚ್ಚಳವಾಗಿರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆಯ ಮೂಲವನ್ನು ನೀವು ಅರ್ಥಮಾಡಿಕೊಂಡಿದ್ದೀರಿ ಎಂದು ನಾನು ಭಾವಿಸುತ್ತೇನೆ. ನಾನೇನು ಪ್ರಶ್ನೆ ಕೇಳಿದ್ದೆ, ತಾವೇನು ಉತ್ತರ ಕೊಟ್ಟಿದ್ದೀರಿ ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಕಾಗದಗಳ ಮೇಲೆ ಏನು ಆದೇಶಗಳಿವೆಯೋ ಆ ಪ್ರತಿಯನ್ನು ಇಲ್ಲಿ ಮುದ್ರಿಸುವಂಥ ಕೆಲಸವನ್ನು ಪ್ರಾಮಾಣಿಕವಾಗಿ ತಾವು ಮಾಡಿದ್ದೀರಿ. ವಾಸ್ತವಿಕವಾಗಿ ಇರುವ ಸಂಗತಿಯೇ ಬೇರೆ. ಈಗ PWD ಗೆ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿದ್ದೀರಿ. PWD ರಾಜ್ಯಾದ್ಯಂತ ಇನ್ನೂ ಕೂಡ ನಾವು ಕೆಲಸ ಮಾಡುವುದಕ್ಕಾಗುವುದಿಲ್ಲ, ಈ ಮರಳು ದಂಧೆಯನ್ನು ನಾವು stop ಮಾಡುವುದಕ್ಕಾಗುವುದಿಲ್ಲ, ನಮ್ಮ ಹತ್ತಿರ staff ಇಲ್ಲವೆನ್ನುತಕ್ಕ ಮಾತನ್ನು ಎಲ್ಲಾ ಕಡೆ ಹೇಳಿದ್ದಾರೆ. ಯಾವ PWD ಯ ಅಧಿಕಾರಿಗಳೂ ಕೂಡ interest ತೆಗೆದುಕೊಳ್ಳುತ್ತಿಲ್ಲ. ನಾನು ತುಮಕೂರು ಮತ್ತು

ಚಿತ್ರದುರ್ಗ ಜಿಲ್ಲೆಗಳಿಗೆ ಸೀಮಿತವಾಗಿ ಹೇಳುವುದಾದರೆ ನಿರಂತರವಾಗಿ ಮರಳಿನ ಲೂಟಿ ನಡೆಯುತ್ತಾ ಇದೆ. PWD ಯ ಯಾರೂ ಕೂಡ ಇಲ್ಲಿಯವರೆಗೆ ಒಂದು ಏರಿಯಾವನ್ನು auction ಮಾಡಿದ ಸಂದರ್ಭಗಳಿಲ್ಲ. ನಮ್ಮಲ್ಲಿ ಲಾರಿಗಳನ್ನು ಹಿಡಿದು ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ಫೈನ್ ಹಾಕಿದ್ದಾರೆ. ರಸ್ತೆಗಳೆಲ್ಲ ಸಂಪೂರ್ಣವಾಗಿ ಹಾಳಾಗಿವೆ. ಇದಕ್ಕೆ ಮೂಲ ಕಾರಣವೆಂದರೆ, ಅಸ್ಪಷ್ಟ ನೀತಿ. ನೀವು ಕಳೆದ ಸಾರಿಯ 67 ಕೋಟಿ ರೂಪಾಯಿಗಳಿಗಿಂತ 79 ಕೋಟಿ ರೂ. ಆದಾಯ ಈ ಸಾರಿ ಬಂದಿದೆ ಎಂದು ಸಮರ್ಥನೀಯವಾಗಿ ಉತ್ತರ ಕೊಡುತ್ತೀರಿ. ಅದು ಉತ್ತರ ಅಲ್ಲ. ನೀವು ಸಮರ್ಪಕವಾಗಿ ಮಾಡಿದ್ದರೆ, ಸುಮಾರು 1 ಸಾವಿರ ಕೋಟಿ ರೂಪಾಯಿ ಬರುತ್ತಿತ್ತು. ಅಸ್ಪಷ್ಟ ಮರಳು ನೀತಿ ಇದಕ್ಕೆ ಕಾರಣವಾಗಿದೆ. ನೀತಿಯನ್ನು ಸರಿಯಾಗಿ ಅನುಷ್ಠಾನ ಮಾಡದೇ ಇರುವುದು ಇದಕ್ಕೆ ಕಾರಣವಾಗಿದೆ. ಹಿಂದೆ ಅಶೋಕ್‌ರವರು ಉತ್ತರ ಕೊಡುವಂಥ ಸಂದರ್ಭದಲ್ಲಿ, ತಮಿಳುನಾಡಿಗೆ deputation ಮಾಡಿದ್ದೇವೆ, ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತಾರೆ, ತಮಿಳುನಾಡಿನಲ್ಲಿ 1 ಸಾವಿರ ಕೋಟಿ ರೂಪಾಯಿ ಆದಾಯ ಬರುತ್ತಿದೆ, ಕರ್ನಾಟಕದಲ್ಲಿ 1 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬರುತ್ತದೆಂದು ಹೇಳಿದರು. 1 ಸಾವಿರ ಕೋಟಿ ರೂಪಾಯಿ ಇರಲಿ ಮೂರು ಕೋಟಿ ರೂಪಾಯಿಗಳನ್ನು ತೆಗೆದು ಕೊಳ್ಳುವುದಕ್ಕಾಗಿಲ್ಲ. ಇದಕ್ಕೆಲ್ಲ ಕಾರಣವೆಂದರೆ, ಎಲ್ಲೋ ಒಂದು ಕಡೆಗೆ ನಾನು ನೇರವಾಗಿ ಹೇಳುತ್ತೇನೆ, ಯಾವ ಸರ್ಕಾರವೂ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಪೋಲೀಸ್‌ನವರನ್ನು ಇಂಥ ನಿರಂತರವಾಗಿ ಲೂಟಿಯಾಗುತ್ತಿರುವುದನ್ನು ತಪ್ಪಿಸಿ ಎಂದು ಕೇಳಿದರೆ, ಸರ್ಕಾರದಿಂದಲೇ ನಮಗೆ ಮೌಖಿಕವಾಗಿ ಆದೇಶವಿದೆ, ಲಾರಿ ಮಾಲೀಕರೇನಿದ್ದಾರೆ, ಅವರಿಗೆ ನೀವು ಸಹಕಾರ ಮಾಡಬೇಕು, ಇಲ್ಲದಿದ್ದರೆ ಬೆಂಗಳೂರು ಅಭಿವೃದ್ಧಿಯೇ ಆಗುವುದಿಲ್ಲ ಎನ್ನುವ ಮಾತು ಹೇಳಿದ್ದಾರೆ. ನೀವು ಎಲ್ಲಿ ಮಾಡುತ್ತೀರೋ, ಬಿಡುತ್ತೀರೋ, ತುಮಕೂರು ಜಿಲ್ಲೆ, ಚಿತ್ರ-ದುರ್ಗ ಜಿಲ್ಲೆಗಳಲ್ಲಿ ನೀವು ಮಾಡದೇ ಇದ್ದರೆ ಖಂಡಿತವಾಗಿಯೂ ಕೂಡ ನಮ್ಮ ಒಂದು ರಸ್ತೆಯೂ ಉಳಿಯುವುದಿಲ್ಲ. ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಕುಡಿಯುವುದಕ್ಕೆ ನೀರು ಸಿಗದೇ ಪರಿತಪಿಸುತ್ತಿರುವ ಪರಿಸ್ಥಿತಿಯಾಗಿದೆ. ದಕ್ಷಿಣ ಕನ್ನಡ

ಜಿಲ್ಲೆಯಲ್ಲಿ ಒಂದು ಪರಿಸ್ಥಿತಿ ಇದೆ. ಅಲ್ಲಿ ಮರಳು ತುಂಬಿದಾಗ ಮರಳು ತೆಗೆಯಬೇಕಾಗುತ್ತದೆ. ಎಲ್ಲಿ ಮರಳು ತುಂಬುತ್ತದೆಯೋ ಅಂಥ ಕಡೆ ನೀವು ಮರಳು ತೆಗೆಸಿ. ನಮ್ಮ ಕಡೆ ಮರಳು ಬೇಕು, ಮರಳಿನಿಂದಲೇ ನೀರು, ಮರಳಿನಿಂದಲೇ ಜೀವ, ನಮ್ಮ ಕಡೆ ಉಳಿಸಿ, ಅಲ್ಲಿ ತೆಗೆಸುವಂಥ ಕೆಲಸ ಮಾಡಿ. ಇದಕ್ಕೇನಾದರೊಂದು ಸ್ಪಷ್ಟವಾದ ತೀರ್ಮಾನವನ್ನು ತೆಗೆದು-ಕೊಳ್ಳದೇ ಇದ್ದರೆ ರಾಜ್ಯದ ಬೊಕ್ಕಸಕ್ಕೂ ನಷ್ಟವಾಗುತ್ತದೆ. ಕುಡಿಯುವ ನೀರನ್ನೂ ಕೊಡುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ಒದಗಿದೆ ಎಂಬುದನ್ನು ದಯಮಾಡಿ ಅರ್ಥಮಾಡಿಕೊಳ್ಳಬೇಕು. ದಯವಿಟ್ಟು ಇದಕ್ಕೆ ತಾವು ಉತ್ತರ ಕೊಡಬೇಕು.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಗುಲಬರ್ಗಾ ಜಿಲ್ಲೆಯಲ್ಲಿ ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ ನಿರಂತರವಾಗಿ ಮರಳು ಕಳ್ಳ ಸಾಗಣೆ ನಡೆಯುತ್ತಿದೆ. ನಾನು SP, DC ಗೆ ಪತ್ರ ಬರೆದಿದ್ದೇನೆ. ಎಲ್ಲರ ಗಮನಕ್ಕೂ ತಂದಿದ್ದೇನೆ. ಆದರೂ ಅದು stop ಆಗುತ್ತಿಲ್ಲ. ಇದೊಂದು ದೊಡ್ಡ ಮಾಫಿಯಾ ಆಗಿದೆ. ಅದಕ್ಕೆ ಸರ್ಕಾರ ನಿರ್ದಿಷ್ಟವಾದ ಒಂದು ನಿರ್ಧಾರ ತೆಗೆ ದುಕೊಳ್ಳಬೇಕು. ಇದನ್ನು ಹೇಗೆ stop ಮಾಡಬೇಕೆಂದು ನಾನೊಂದು ಸಲಹೆ ಕೊಟ್ಟಿದ್ದೆ. ಇವರು ಟೆಂಡರ್ ಕರೆದಿದ್ದಾರೆ. ಟೆಂಡರ್ ಕರೆದರೆ, ಯಾರು ಮರಳನ್ನು ತೆಗೆದು PWD dumpಗೆ ಹಾಕಬೇಕು? ಅವನು ಮರಳು ತೆಗೆದು market ನಲ್ಲಿ direct ಆಗಿ ಮಾರುತ್ತಿದ್ದಾನೆ. ಆ ದಂಧೆ 24 hours ನಡೆಯುತ್ತಿದೆ. ನೀವು department ನಿಂದ ಟೆಂಡರ್ ಕರೆಯಬೇಡಿ. Department ನವರೇ 3–4 tipperಗಳು, JCB ತಂದು ಒಂದು ಕಡೆ stock ಮಾಡಿ ಒಂದು ರೇಟ್ ಫಿಕ್ಸ್ ಮಾಡಿ ಮಾರಿದರೆ ಇದಕ್ಕೊಂದು solution ಸಿಗಲಿಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಏನಾದರೂ ಮಾಡಲೇಬೇಕು. ಇಲ್ಲವೆಂದರೆ, ನನ್ನ ಮತಕ್ಷೇತ್ರದಲ್ಲಿಯಂತೂ ಮರಳು ಕಳ್ಳಸಾಗಣೆಯನ್ನು ನಿಲ್ಲಿಸಲಿಕ್ಕೇ ಆಗುತ್ತಿಲ್ಲ. ನಾನು ಒಬ್ಬ ಶಾಸಕನಾಗಿ ಅಸಹಾಯಕನಾಗಿದ್ದೇನೆ.

ಶ್ರೀ ನೆ.ಲ. ನರೇಂದ್ರಬಾಬು : ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಇವತ್ತು ಮರಳು ಎಷ್ಟು ದುಬಾರಿಯಾಗಿದೆ ಎಂದರೆ,

ಮಧ್ಯಮ ವರ್ಗದವರಾಗಲಿ, ಬಡವರಾಗಲಿ, ಸರ್ಕಾರದ ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಮರಳಿಗೆ ಪರ್ಯಾಯವಾಗಿ, ವೈಜ್ಞಾನಿಕವಾಗಿ ಏನಾದರೂ ಸರ್ಕಾರ ಪರಿಹಾರ ಕೊಡಲಿಕ್ಕೆ ಸಾಧ್ಯವಿದೆಯೇ ಎಂಬ ಬಗ್ಗೆ ಅನ್ವೇಷಣೆ ಮಾಡಿದೆಯೇ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ವೈ.ಎನ್. ರುದ್ರೇಶ್‌ಗೌಡ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : Please, ಕುಳಿತುಕೊಳ್ಳಿ.

ಶ್ರೀ ವೈ.ಎನ್. ರುದ್ರೇಶ್‌ಗೌಡ : ರಸ್ತೆಗಳನ್ನು improve ಮಾಡುವುದಕ್ಕೆ ಹಣ ಕೊಡಿ.

ಅಧ್ಯಕ್ಷರು : ನೀವು ಎದ್ದು ನಿಂತು ನಿಮ್ಮ ಇಷ್ಟಕ್ಕೆ ನೀವೇ ಹೇಳಬೇಡಿ.

ಶ್ರೀ ಅಮರೇಶ್ : ಕೋಲಾರ ಜಿಲ್ಲೆಯಲ್ಲಿ ಮರಳಿನ ದಂಧೆ ದೊಡ್ಡ ದಂಧೆಯಾಗಿದೆ. ಈಗಾಗಲೇ ನಾವು ಕೋರ್ಟ್‌ಗೆ ಅಲೆಯುವ ಪರಿಸ್ಥಿತಿ ಇದೆ. ಬೇರೆ ಯಾರೋ ಮಾಡಿದ ತಪ್ಪನ್ನು ನಮ್ಮ ಮೂತಿಗೆ ಹಚ್ಚಿ ನಾವು ಕೋರ್ಟ್‌ಗೆ ಓಡಾಡುವ ಹಾಗಾಗುತ್ತಿದೆ. ಹೇಗೆ ಆಗಿದೆ ಎಂದರೆ ಯಾರೋ ಮಾಡುವವರು ಮಾಡುತ್ತಿದ್ದಾರೆ. ನಾವು ಕೋರ್ಟ್‌ಗೆ ಅಲೆಯುವ ಪರಿಸ್ಥಿತಿ ಬಂದಿದೆ. ನಮಗೆ ಈ ತರಹ ಏಕೆ ಮಾಡುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು : ಆಯಿತು, ಉತ್ತರ ಹೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ತಾವು ಮರಳಿಗೆ ಟೆಂಡರ್ ಕರೆಯುತ್ತಿದ್ದೀರಿ. ರಸ್ತೆಗಳು ಎಷ್ಟು ಹಾಳಾಗುತ್ತಿವೆ ಎಂಬ ಬಗ್ಗೆ ಮಾನ್ಯ ಜಯಚಂದ್ರರವರು ಹೇಳಿದ್ದಾರೆ. ದಯಮಾಡಿ ಗ್ರಾಮ ಪಂಚಾಯಿತಿಗೂ ಕೂಡ ತಾವು ಸ್ವಲ್ಪ ಷೇರು ಹಣವನ್ನು ಕೊಡುತ್ತೀರಿ. ಅದೇ ತರಹ PWD ಗೂ ಕೊಡಿ. ZP ಗೂ ಕೊಟ್ಟರೆ ರಸ್ತೆಗಳನ್ನು ರಿಪೇರಿ ಮಾಡಬಹುದು. ದಯಮಾಡಿ, ಆ ಕಡೆ ಗಮನವಿರಲಿ. PWD ಯವರಿಗೆ ವಿಶೇಷ ಸಿಬ್ಬಂದಿಯನ್ನು ಕೊಡಿ. ರಸ್ತೆ ಕೆಲಸ ಮಾಡುವುದಕ್ಕೇ ಅವರಲ್ಲಿ ಇಂಜಿನಿಯರ್ಸ್ ಇಲ್ಲ. ಅವರು ಎಲ್ಲಿ ಇದಕ್ಕೆಲ್ಲ ಭಾಗಿಯಾಗುತ್ತಾರೆ? ದಯಮಾಡಿ, ಆ ಕಡೆ ತಮ್ಮ ಗಮನವಿರಲಿ.

ಶ್ರೀ ಬಿ. ಸುರೇಶ್‌ಗೌಡ : ಮಾನ್ಯ ಜಯಚಂದ್ರರವರು ಮರಳು ಕಳ್ಳಸಾಗಾಣಿಕೆ ಬಗ್ಗೆ ಸ್ಪಷ್ಟ ನೀತಿ ಬೇಕೆಂದು ಹೇಳಿದರು. ಇದು ಒಳ್ಳೆಯ

ಸಲಹೆ. ಆದರೆ ನನ್ನ ವಿಧಾನಸಭಾ ಕ್ಷೇತ್ರವಾದ ತುಮಕೂರು ಗ್ರಾಮಾಂತರದಲ್ಲಿ filter ಮರಳಿನ ಹಾವಳಿ ಜಾಸ್ತಿ ಇದೆ. Filter ಮರಳು ಮಾಡಿ ಅದನ್ನು ನೀರಿನ ಗುಂಡಿಗೆ ತುಂಬುತ್ತಾರೆ. ಆ ಗುಂಡಿಗೆ ತುಂಬಿಸಿದಾಗ ಅದರಲ್ಲಿ ಬಿದ್ದು ಒಬ್ಬಳು ತಾಯಿ ಮತ್ತು ಒಂದು ಮಗು ಸತ್ತು ಹೋದರು. ಪ್ರಜಾವಾಣಿ ಸೇರಿದಂತೆ ಎಲ್ಲಾ ಪತ್ರಿಕೆಗಳಲ್ಲಿಯೂ ಆ ವಿಷಯ ವರದಿಯಾಗಿತ್ತು. ಒಂದು ತಿಂಗಳ ಹಿಂದೆ ಪಿಯುಸಿ ಓದುತ್ತಿದ್ದ ಒಬ್ಬ ಪ್ರತಿಭಾವಂತ ವಿದ್ಯಾರ್ಥಿ ಆ ಗುಂಡಿಗೆ ಬಿದ್ದು ಸತ್ತಿದ್ದಾನೆ. ಈಗಾಗಲೇ 4 ಜನ ಆ filter ಮರಳಿನ ಗುಂಡಿಗೆ ಬಿದ್ದು ಸತ್ತಿದ್ದಾರೆ. ನಾನು ಡಿ.ಸಿ.ಯವರಿಗೂ ಸಹ ಮನವಿ ಮಾಡಿದೆ. ಎಸ್.ಪಿ ಯವರಿಗೂ ಮನವಿ ಮಾಡಿದೆ. ತಹಸೀಲ್ದಾರ್‌ರವರಿಗೂ ಮನವಿ ಮಾಡಿದೆ. ಇದುವರೆಗೂ ಸಹ ಆ filter ಗುಂಡಿಗೆ ಬಿದ್ದು ಸಾಯುವವರ ಸಂಖ್ಯೆ ಜಾಸ್ತಿಯಾಗಿದೆ. ತಕ್ಷಣ filter ಮರಳು ದಂಧೆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಜಯಚಂದ್ರರವರು ಬಹಳ ಪ್ರಮುಖವಾದಂತಹ ಪ್ರಶ್ನೆ ಎತ್ತಿದ್ದಾರೆ. ಮರಳು ತೆಗೆಯುವ ಬಗ್ಗೆ, ಮರಳಿನ ನೀತಿಯ ಬಗ್ಗೆ, ಮರಳು ಸಾಗಾಣಿಕೆ ಬಗ್ಗೆ, ಇದರಿಂದೇನು ತೊಂದರೆಯಾಗುತ್ತಿದೆ ? ದೊಡ್ಡ ಪ್ರಮಾಣದಲ್ಲಿ ಮರಳು ತೆಗೆಯುವುದರಿಂದ ಕುಡಿಯುವ ನೀರಿಗೇನು ತೊಂದರೆಯಾಗುತ್ತಿದೆ ಎಂಬ ಬಗ್ಗೆ ಎಲ್ಲವನ್ನೂ ಹೇಳಿದ್ದಾರೆ. ಇನ್ನಿತರ ಶಾಸಕರು ಸಹ ತಮ್ಮ ಕ್ಷೇತ್ರದಲ್ಲಿ ಇರತಕ್ಕ ಸಮಸ್ಯೆಗಳನ್ನೂ ಹೇಳಿದ್ದಾರೆ. ನಾವು ಹೊಸದಾಗಿ ಮರಳು ನೀತಿಯನ್ನು ಮಾಡಿದಾಗ ಅದಕ್ಕಿಂತ ಮುಂಚೆ Mines and Geology ಇಲಾಖೆಗೆ ಆ ಜವಾಬ್ದಾರಿ ಇತ್ತು. ಆದರೆ, ಅಲ್ಲಿ ಸಿಬ್ಬಂದಿ ಕೊರತೆ ಇತ್ತು. ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿರಲಿಲ್ಲ. ಹೀಗಾಗಿ, ಬೇರೆ ರಾಜ್ಯಗಳಲ್ಲಿರುವ ವ್ಯವಸ್ಥೆಯನ್ನು ತೆಗೆದುಕೊಂಡು ಒಂದು ಇಲ್ಲಿ implement ಮಾಡುವ ಪ್ರಯತ್ನ ಮಾಡಿದ್ದೇವೆ. ಲೋಕೋಪಯೋಗಿ ಇಲಾಖೆಯ under ನಲ್ಲಿ ಇದನ್ನು ಅನುಷ್ಠಾನ ಮಾಡಬೇಕೆಂದಿತ್ತು. ಏಕೆಂದರೆ, ಅಲ್ಲಿ ಹೆಚ್ಚು ಇಂಜಿನಿಯರ್ಸ್ ಇರುತ್ತಾರೆ, ಸಿಬ್ಬಂದಿ ಇರುತ್ತಾರೆ ಎನ್ನುವ ಕಾರಣಕ್ಕಾಗಿ

ಆ ರೀತಿ ಯೋಚನೆ ಇತ್ತು. ಲೋಕೋಪಯೋಗಿ ಇಲಾಖೆಯಲ್ಲೂ ಏನು ಸಮಸ್ಯೆಯಾಗಿದೆ ಎಂದರೆ, ಅವರೂ ಸಹ ಉಳಿದಿರುವ ಎಲ್ಲಾ ಕಾಮಗಾರಿಯನ್ನು ಮಾಡಲಿಕ್ಕೆ Zilla Panchayath, Taluk Panchayath ಇರಬಹುದು, National Highway and State Highway, ಲೋಕೋಪಯೋಗಿ ಇಲಾಖೆಯ ಕೆಲಸವಿರಬಹುದು ಆ ಕೆಲಸ ಅವರಿಗೆ heavy ಇದೆ. ಅದನ್ನೂ ಅವರಿಗೆ ಸರಿಯಾಗಿ ನಿಭಾಯಿಸಲಿಕ್ಕಾಗುತ್ತಿಲ್ಲ. ಆ ವಸ್ತುಸ್ಥಿತಿ ನನ್ನ ಗಮನಕ್ಕೂ ಬಂದಿದೆ. ನಾನು ಈ ರಾಜ್ಯದ ಮುಖ್ಯಮಂತ್ರಿಯಾದ ಮೇಲೆ ಇದರ ಸಲುವಾಗಿಯೇ ಪ್ರತ್ಯೇಕವಾಗಿ ೩-೪ times separate meeting ಮಾಡಿದೆ. ಮರಳು ನೀತಿ ಇದೆ. ಆ ಮರಳು ನೀತಿಯಲ್ಲಿ ಇನ್ನೂ ನಾವು ಬಹಳಷ್ಟು ಸುಧಾರಣೆಯನ್ನು ತರಬೇಕಾಗಿದೆ. ಕೆಲವು ಲೋಪದೋಷಗಳಿವೆ. ಅದನ್ನೂ ನಾನೂ ಒಪ್ಪಿಕೊಳ್ಳುತ್ತಿದ್ದೇನೆ. ಇದನ್ನು ಯಾವ ಇಲಾಖೆಗೆ ವಹಿಸಿ, ಯಾವ ನೀತಿಯ ಪ್ರಕಾರ ಅದನ್ನು ನಾವು ಅನುಷ್ಠಾನ ಮಾಡಬೇಕು, ಪ್ರಾಮಾಣಿಕವಾಗಿ ಮಾಡಬೇಕು ಅದರ ಬಗ್ಗೆಯೂ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಲೋಪದೋಷವಿಲ್ಲವೆಂದು ನಾನು ಹೇಳುವುದಿಲ್ಲ. ನಾವು ಯಾವುದನ್ನೂ defend ಮಾಡುತ್ತಿಲ್ಲ. ಸಮಸ್ಯೆಯಾಗಿದೆ. ಇದು ನನ್ನ ಗಮನಕ್ಕೆ ಬಂದಿದೆ. ಕಳ್ಳಸಾಗಾಣಿಕೆ ದೊಡ್ಡ ಪ್ರಮಾಣದಲ್ಲಿ ನಡೆಯುವುದು ಒಂದು ಕಡೆ ಇದೆ. ಅಲ್ಲಿ ಯಾರಾದರೂ ಅದನ್ನು ಹಿಡಿಯಲಿಕ್ಕೆ ಹೋದರೆ, ಅಲ್ಲಿಂದ complaints ಬರುತ್ತವೆ. ಲಾರಿಗಳನ್ನು ಹಿಡಿದು 25,000, 50000 ರೂಪಾಯಿ ಫೈನ್ ಅನ್ನು ಅಲ್ಲಿಯ ತಹಸೀಲ್ದಾರ್, ಪೋಲೀಸರು ಹಾಕುತ್ತಾರೆ. ಫೈನ್ ಬಹಳವಾಯಿತು ಎಂದು ಹೇಳುತ್ತಾರೆ. ತಮಗೆ ಬಹಳ harassment ಆಗುತ್ತಿದೆ ಎಂದು association ನವರು ಬಂದಿದ್ದರು. ಆದರೆ, ತಮಗೆ harassment ಆಗುತ್ತಿದೆ ಎಂದು ಹೆಚ್ಚಿಗೆ ಕೂಗು ಹಾಕುತ್ತಿರುವವರು ಆ association ನವರೇ. ಎಲ್ಲೋ ಒಂದು ಕಡೆ ಲೋಪದೋಷವಿದೆ. ಅದನ್ನು ಸರಿಪಡಿಸಬೇಕೆನ್ನುವ ಅರಿವೂ ಸರ್ಕಾರದ ಗಮನಕ್ಕೆ ಬಂದಿದೆ. ಸರಿಪಡಿಸುವ ಪ್ರಯತ್ನ ಮಾಡಿದ್ದೇನೆ. ಈಗಾಗಲೇ ನಾನು 4-5 ಸಾರಿ ಅಧಿಕಾರಿಗಳ ಸಭೆ ಕರೆದಿದ್ದೇನೆ. ಇನ್ನೂ reform ಮಾಡುವ ರೀತಿಯಲ್ಲಿ ಮರಳು ನೀತಿಯನ್ನು ಮಾಡಿಕೊಂಡು ಯಾವ

ಇಲಾಖೆ ಮುಖಾಂತರ ಇದನ್ನು ಅನುಷ್ಠಾನ ಮಾಡಲಿಕ್ಕೆ ಸಾಧ್ಯವಿದೆ ಎನ್ನುವ ಚಿಂತನೆಯನ್ನೂ ನಾನು ಮಾಡುತ್ತಿದ್ದೇನೆ. ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ದಯವಿಟ್ಟು ತಮ್ಮ ಸಲಹೆ ಸೂಚನೆಗಳನ್ನೂ ಕೊಡಿ. ಇದನ್ನು ಯಾವ ರೀತಿಯಾಗಿ ಪರಿಣಾಮಕಾರಿಯಾಗಿ ಮಾಡಬೇಕೆಂಬ ಬಗ್ಗೆ ತಮ್ಮ ಸಲಹೆ ಸೂಚನೆ ಕೊಡಿ. ಏಕೆಂದರೆ, ಎಲ್ಲಿ ಇದರ ಅನುಷ್ಠಾನ ಮಾಡಬೇಕು? ಎಲ್ಲಿ ಲೋಪದೋಷವಿದೆ ಅದನ್ನು ಸರಿಪಡಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ತಮ್ಮ ಕಡೆಯಿಂದಲೂ ಸಲಹೆ ಸೂಚನೆ ಬರಲಿ. ಆದಷ್ಟುಬೇಗನೆ ಸರಿಯಾದ ದಿಕ್ಕಿನಲ್ಲಿ ಅನುಷ್ಠಾನ ಮಾಡುವಂಥದ್ದು, ಕಳ್ಳಸಾಗಾಣಿಕೆಯನ್ನು ತಡೆಹಿಡಿಯುವಂಥದ್ದಕ್ಕೆ ನಾನು ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ. ಸುರೇಶ್‌ಗೌಡ : Filter ಮರಳು ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : IPC ಪ್ರಕಾರ stolen property ಗೆ case ಹಾಕುವುದಕ್ಕೆ ಅಧಿಕಾರವಿರುತ್ತದೆ. ನೀವು notification, Government Order ನಲ್ಲಿ ಏನು ಮಾಡಿದ್ದೀರಿ ಎಂದರೆ....

(ಗೊಂದಲ)

ಶ್ರೀ ವೀರಣ್ಣ ಸಿ.ಚರಂತಿಮಠ : ಇದು ಎಲ್ಲಾ ಕಡೆ ಸಮಸ್ಯೆಯಾಗಿದೆ. ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಈ ವಿಷಯದ ಮೇಲೆ ಚರ್ಚಿಸಲು ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಎಲ್ಲರ ಸಲಹೆ ಸೂಚನೆ ತೆಗೆದುಕೊಳ್ಳುವ ಅವಶ್ಯಕತೆ ಇದೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಸದನ ಇರುವುದೇ ಇನ್ನು ಎರಡು ದಿವಸ. ಈ ಅವಧಿಯಲ್ಲೇ ಚರ್ಚೆಯಾಗಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾಡೋಣ. ರಾಜ್ಯದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಈ ಸಮಸ್ಯೆಯಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ : ತಾವು ಹೇಳಿರ್ದನ್ನು ನಾನು ಒಪ್ಪುತ್ತೇನೆ. ಒಂದು ಸಾವಿರ ಕೋಟಿ ರೂಪಾಯಿ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾಡಲಿಕ್ಕೆ ತಯಾರಿದ್ದೇನೆ. I am ready to do it.

ಅಧ್ಯಕ್ಷರು : ಅರ್ಧ ಗಂಟೆ ಕಾಲಾವಧಿ ಚರ್ಚೆ ಮಾಡೋಣ.

(ಗೊಂದಲ)

ಭೂಮಾಪನಾ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ

73 (156)

ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು)

ಅ) ಮದ್ದೂರು ತಾಲ್ಲೂಕು, ಭೂಮಾಪನಾ ಇಲಾಖೆಯ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆಯಿಂದ ರೈತರ ಕೆಲಸ ಕಾರ್ಯಗಳಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗದ್ದಲ್ಲಿ ಕೊರತೆಯಿರುವ ಸಿಬ್ಬಂದಿಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಕಳೆದ ಮೂರು ವರ್ಷಗಳಿಂದ ರೈತರು ತಮ್ಮ ಜಮೀನುಗಳನ್ನು ಸರ್ವೆ ಮಾಡಿಸಲು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು)

ಈ) ಹಾಗಿದ್ದಲ್ಲಿ, ಅಂತಹ ರೈತರಿಂದ ಹಣ ಪಾವತಿಸಿ ಕೊಂಡು ಸರ್ವೆ ಕಾರ್ಯ ಪೂರ್ಣಗೊಳಿಸಿರುವ ಮತ್ತು ಪೂರ್ಣಗೊಳಿಸದೇ ಇರುವ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು)?